## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,  ಮೈಸೂರು.

ಎಸ್.ಸಿ. ಸಂಖ್ಯೆ 246/2023

| | | |
|---|---|---|
| ಸಾಕ್ಷಿದಾರರ ಹೆಸರು | : ನಂದಿನಿ | ಪಿಡಬ್ಲ್ಯೂ : 3 |
| ತಂದೆಯ / ಗಂಡನ ಹೆಸರು | : ಸುರೇಶ | ಸಿಡಬ್ಲ್ಯೂ : 6 |
| ವಯಸ್ಸು | : 49 ವರ್ಷ | |
| ಉದ್ಯೋಗ | : ಕೂಲಿ ಕೆಲಸ | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 07.03.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ದೂರುದಾರರಾದ ಸುರೇಶ್ ನನ್ನ ಗಂಡ. ನನಗೆ ಒಬ್ಬ ಮಗನಿದ್ದಾನೆ. ಆತನ ಹೆಸರು ಭರತ್ ಎಂದು. ನಾನು ಮತ್ತು ನನ್ನ ಗಂಡ ಕೂಲಿ ಕೆಲಸ ಮಾಡುತ್ತಿದ್ದೆವು. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಈ ಹಿಂದೆ ನಾನು ನೋಡಿರುವುದಿಲ್ಲ.

2. ಈ ಘಟನೆ ನಡೆದ ಅಂದಾಜು 2-3 ವರ್ಷಗಳಾಗಿವೆ. ಈ ಘಟನೆಯ ಬಗ್ಗೆ ಏನೂ ಗೊತ್ತಿಲ್ಲ, ಮಂಡಿ ಪೋಲೀಸರು ನನ್ನ ಗಂಡನನ್ನು ಕೆ ಆರ್ ಆಸ್ಪತ್ರೆಗೆ ದಾಖಿಸಿದ್ದರು. ಆಗ ನಾನು ಮದುವೆ ಮನೆಯಲ್ಲಿ ಕಸ ಗುಡಿಸುವ ಸಲುವಾಗಿ ಹೋಗಿದ್ದೆ. ಮಾರನೇ ದಿನ ಬೆಳಿಗ್ಗೆ 11.00 ಗಂಟೆಗೆ ನನ್ನ ಗಂಡನನ್ನು ಆಸ್ಪತ್ರೆಗೆ ದಾಖಲಿಸಿದ್ದ ಬಾಬ್ತು ಗೊತ್ತಾಯಿತು. ನಂತರ ನಾನು ಆಸ್ಪತ್ರೆಗೆ ಹೋದೆ. ಅವರ ಎರಡೂ ಮೊಣಕಾಲುಗಳ ಕೆಳಗೆ ಕ್ಯೂಯಿದ್ದರು.

ಆವರಿಗೆ ನಡೆಯಲು ಆಗುತ್ತಿರಲೇ ಇಲ್ಲ. ನನ್ನ ಗಂಡ ಮಾತನಾಡುವ ಸ್ಥಿತಿಯಲ್ಲಿದ್ದರು. ನಾನು ಅವರನ್ನು ಏನಾಯಿತು ಎಂದು ಕೇಳಿದೆ. ಆಗ ಅವರು , ನನ್ನನ್ನು ಯಾರೋ ಕರೆದುಕೊಂಡು ಹೋಗಿ , ಕುಡಿಸಿ , ಮೊಣಕಾಲಿನ ಕೆಳ ಭಾಗವನ್ನು ಕ್ಯೊಯ್ದುರು ಎಂದು ಹೇಳಿದರು. ಆ ರೀತಿ ಕ್ಯೊಯ್ದುವರು ಯಾರು ಎಂದು ಅವರು ನನಗೆ ಹೇಳಲಿಲ್ಲ. ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೂಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

<u>ಪಾಟೀ ಸವಾಲು ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

3. ನನ್ನ ಗಂಡನನ್ನು ಆಸ್ಪತ್ರೆಯಲ್ಲಿ ಕೇಳಿದಾಗ ಅವರು ದಿಃ 13.12.2022 ರಂದು ಗೋರು, ಮಂಜ , ಗೋಪಿ ರವರುಗಳು ದೇವರಾಜ ಮೊಹಲ್ಲಾ , ಧನ್ವಂತ್ರಿ ರಸ್ತೆಯಲ್ಲಿ ಸಿಕ್ಕಿ ಎಣ್ಣೆ ಕುಡಿಯೋಣ ಎಂದು ತಿಳಿಸಿ , ಬಂಬೂ ಬಜಾರ್ ಎಸ್ ಆರ್ ರಸ್ತೆಯಲ್ಲಿರುವ ರಾಜಲಕ್ಷೀ ಸ್ಪಿರಿಟ್ ವೈನ್ ಶಾಪ್ ನಲ್ಲಿ ಎಣ್ಣೆಯನ್ನು ತೆಗೆದುಕೊಂಡು ಆಟೋ ರಿಕ್ಷಾದಲ್ಲಿ ಗುಂನಂ ಶಾ ವಾಲಿ ಗುಡ್ಡದ ಬಳಿಗೆ ಕರೆದುಕೊಂಡು ಹೋಗಿ ಒಟ್ಟಿಗೆ ಎಣ್ಣೆ ಕುಡಿದು , ರಾತ್ರಿ 09.00 ಗಂಟೆಗೆ ಹಳೆಯ ವಿಚಾರದಲ್ಲಿ ಗಲಾಟೆ ಮಾಡಿದರು ಎಂದು ಹೇಳಿದರು ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ವ್ಯಕ್ತಿಗಳ ಹೆಸರನ್ನು ನನ್ನ ಗಂಡ ಹೇಳಿರುವುದಿಲ್ಲ ಎನ್ನುತ್ತಾರೆ. ನಂತರ ಗೋರು ಅವರ ಕಾಲುಗಳನ್ನು ಹಗ್ಗದಿಂದ ಕಟ್ಟಿ ಹಾಕಿ ಚಾಕುವಿನಿಂದ ಎಡದಕಾಲು ಮತ್ತು ಬಲಗಾಲನ್ನು ಕ್ಯೊಯ್ದು ರಕ್ತ ಗಾಯ ಮಾಡಿದ್ದು , ಗೋಪಿ ಕಟ್ಟರ್ ಬ್ಲೇಡ್ ರೇಸರ್ ನಿಂದ ಅವರ ಮುಖ ಮತ್ತು ಕೆನ್ನೆಗಳಿಗೆ ಕ್ಯೊಯ್ದು , ಅಕ್ಮಲ್ ಪಾಷ ಉ ಮಂಜ ಕಾಲಿನಿಂದ

ಒದ್ದು ಕೆಟ್ಟ ಪದಗಳಿಂದ ಬೈದರು ಎಂದು ನನ್ನಲ್ಲಿ ಹೇಳಿದ್ದರು ಎಂದರೆ ಸರಿಯಲ್ಲ. ಅಲ್ಲದೇ ಅವರೆಲ್ಲರು ಅವರನ್ನು ಸಾಯಿಸಲು ಪ್ರಯತ್ನ ಪಟ್ಟಿದ್ದು, ಸಾಯಿಸದೇ ಬಿಡುವುದಿಲ್ಲಎಂದು ಪ್ರಾಣ ಬೆದರಿಕೆಯನ್ನು ಸಹ ಹಾಕಿದ್ದರು ಎಂದು ನನ್ನಲ್ಲಿ ತಿಳಿಸಿರುತ್ತಾರೆ ಎನ್ನುವುದು ಸರಿಯಲ್ಲ.

4. ಈಗ ಓದಿ ಹೇಳಿದಂತೆ ಅಂದರೆ , "ದಿಃ 13.12.2022 ರಂದು ಸಂಜೆ ......... ... ಕೇಸು ದಾಖಲಾಗಿರುತ್ತದೆ ಎಂದು ತಿಳಿಸಿದರು " ಎಂದು ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 5 ಎಂದು ಗುರುತುಪಡಿಸಿಕೊಳ್ಳಲಾಯಿತು.

5. ನನ್ನ ಗಂಡ ಈಗ ಮೃತ ಪಟ್ಟಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ "ಇರುವುದಿಲ್ಲ "

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.